# ವಿಜಯವಾಣಿ

ಕನ್ನಡಿಗರ ಧ್ವನಿ

**Sunday 28th July 2019, Page No.05**

**The Inaugural event RVCE Incubation Center.**

ಡಾ. ವಿಜಯ ಸಂಕೇಶ್ವರ ಅಭಿಪ್ರಾಯ | ಆರ್‌ವಿಸಿಇನಲ್ಲಿ ಇನ್‌ಕ್ಯುಬೇಷನ್ ಕೇಂದ್ರ ಉದ್ಘಾಟನಾ ಕಾರ್ಯಕ್ರಮ

## ಸ್ಟಾರ್ಟಪ್‌ಗಳಿಂದ ಭಾರತದ ಭವಿಷ್ಯ ಭದ್ರ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಸದ್ಯ ಭಾರತ ವಿಶ್ವದಲ್ಲೇ ಅತಿಹೆಚ್ಚು ಯುವಶಕ್ತಿಯನ್ನು ಹೊಂದಿದ ದೇಶ ಎಂಬ ಹೆಗ್ಗಳಿಕೆ ಗಳಿಸುತ್ತಿದ್ದರೂ, ಇನ್ನು 25 ವರ್ಷದಲ್ಲಿ ಅತಿಹೆಚ್ಚು ವೃದ್ಧರಿರುತ್ತಾರೆ. ಈಗಿನ ಯುವಕರು ಸ್ಟಾರ್ಟಪ್‌ಗಳಲ್ಲಿ ತೊಡಗಿಸಿಕೊಂಡು ಭಾರತವನ್ನು ತಂತ್ರಜ್ಞಾನ ಕ್ಷೇತ್ರದಲ್ಲಿ ಜಾಗತಿಕ ಸ್ಪರ್ಧೆ ನೀಡಲು ಸಜ್ಜುಗೊಳಿಸದಿದ್ದರೆ ಭವಿಷ್ಯದಲ್ಲಿ ತೊಂದರೆಯಾಗುತ್ತದೆ ಎಂದು ವಿಆರ್‌ಎಲ್ ಸಮೂಹ ಸಂಸ್ಥೆಗಳ ಚೇರ್ಮನ್ ಡಾ. ವಿಜಯ ಸಂಕೇಶ್ವರ ತಿಳಿಸಿದ್ದಾರೆ.

**» ಕಾನೂನು, ನೈತಿಕತೆ ಪಾಲನೆಯೂ ಮುಖ್ಯ**

ನಗರದ ಆರ್.ವಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಸ್ಟಾರ್ಟಪ್‌ಗಳಿಗಾಗಿ ಸ್ಥಾಪಿಸಿರುವ ಇನ್‌ಕ್ಯುಬೇಷನ್ ಕೇಂದ್ರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಹೊಸದಾಗಿ ಉದ್ಯಮ ಆರಂಭಿಸುವವರಿಗೆ ಕಿವಿಮಾತು ಹೇಳಿದರು.

ಸ್ಟಾರ್ಟಪ್ ಎಂಬ ಹೆಸರು ಹೊಸತಾದರೂ ಈ ಹಿಂದೆಯೂ ಅನೇಕ ಸ್ಟಾರ್ಟಪ್‌ಗಳಿದ್ದವು. 4 ದಶಕದ ಹಿಂದೆ ವಿಆರ್‌ಎಲ್, ಇನ್ಫೋಸಿಸ್ ಕಂಪನಿಗಳೂ ಸ್ಟಾರ್ಟಪ್‌ಗಳಾಗಿದ್ದವು. ಒಂದು ದೂರವಾಣಿ ಖರೀದಿಸಲು ಐದಾರು ವರ್ಷ ಕಾಯಬೇಕಾದ ಅವಶ್ಯಕತೆ ಈಗಿಲ್ಲ. ತಂತ್ರಜ್ಞಾನವನ್ನು ಹೆಚ್ಚೆಚ್ಚು ಬಳಸಿಕೊಳ್ಳುವ ಅವಕಾಶ ಇಂದಿನ ಯುವಪೀಳಿಗೆಗೆ ಇದೆ. ಐದಾರು ದಶಕ ಕಷ್ಟಪಟ್ಟು ಕಟ್ಟಿದರೂ ಸಾವಿರಾರು ಕೋಟಿ ರೂ. ವಹಿವಾಟು ನಡೆಸುವ ಕಂಪನಿಗಳಿದ್ದರೆ, ಈಗಿನ ತಂತ್ರಜ್ಞಾನ ಬಳಸಿಕೊಂಡ ಕಂಪನಿಗಳು 2-3 ವರ್ಷಗಳಲ್ಲಿಯೇ ಲಕ್ಷಾಂತರ ಕೋಟಿ ರೂ. ವಹಿವಾಟಿನಲ್ಲಿವೆ ಎಂದರು.

ಚಿಕ್ಕ ವಯಸ್ಸಿನಲ್ಲೇ ಉದ್ಯಮ ಕ್ಷೇತ್ರಕ್ಕೆ ಕಾಲಿಟ್ಟವರು ಉತ್ತಮ ಉದ್ಯಮಿಯಾಗುತ್ತಾರೆ. ಆದರೆ, ಉದ್ಯಮ ಆರಂಭಿಸಿದ ತಕ್ಷಣವೇ ಬೆಳವಣಿಗೆ ಆಗುವುದಿಲ್ಲ. ನನ್ನ ಉದ್ಯಮ ಪ್ರಾರಂಭದ 20-30 ವರ್ಷಗಳಲ್ಲಿ ನಿದ್ರೆಯಿಲ್ಲದ ರಾತ್ರಿಗಳನ್ನು ಕಳೆದಿದ್ದೇನೆ. ಅನೇಕ ಬಾರಿ ಅದು ಆರೋಗ್ಯದ ಮೇಲೆಯೂ ಪರಿಣಾಮ ಬೀರಬಹುದು. ಎಲ್ಲದಕ್ಕೂ ತಾಳ್ಮೆ ಇರಬೇಕು ಎಂದು ಹೇಳಿದರು.

ಎಷ್ಟೇ ಕಷ್ಟಗಳು ಎದುರಾದರೂ ಕಾನೂನು ಮತ್ತು ನೈತಿಕತೆ ಬಿಟ್ಟು ಉದ್ಯಮ ನಡೆಸುವುದಿಲ್ಲ ಎಂಬ ಸಂಕಲ್ಪ ತೊಡಬೇಕು. ಸಾರಿಗೆ ಉದ್ಯಮ ಆರಂಭಿಸಿದಾಗ ಅನೇಕರು, ವಾಮ ಮಾರ್ಗಗಳನ್ನು ಅನುಸರಿಸುವಂತೆ ಸಲಹೆ ನೀಡಿದ್ದರು. ಆದರೆ, ಆ ದಾರಿಯಲ್ಲಿ ನಾನು ನಡೆಯಲಿಲ್ಲ. ವಾಮಮಾರ್ಗದಲ್ಲಿ ನಡೆಸುತ್ತಿದ್ದವರೆಲ್ಲರೂ ಉದ್ಯಮ ಬಂದ್ ಮಾಡಿದ್ದಾರೆ. ಹೊಸ ಉದ್ಯಮ ಆರಂಭಿಸುವಾಗ ಉತ್ತರದಾಯಿತ್ವ, ನೀತಿ, ಹಣಕಾಸಿನ ಶಿಸ್ತಿನ ನಿರ್ವಹಣೆ ಅತ್ಯವಶ್ಯಕ ಎಂದರು.

ಸ್ಟಾರ್ಟಪ್ ಸ್ಥಾಪಿಸಿರುವ ಯುವಕರಿಗೆ ಬೆಂಬಲಿಸಲು ಇನ್‌ಕ್ಯುಬೇಷನ್ ಕೇಂದ್ರ ಆರಂಭಿಸುತ್ತಿರುವುದು ಉತ್ತಮ ಬೆಳವಣಿಗೆ. ಹಣ, ಹೆಸರಿಗೆ ಮಾತ್ರವಲ್ಲದೆ ಸಮಾಜದ ಒಳಿತಿಗಾಗಿ, ದೂರಗಾಮಿ ಬೆಳವಣಿಗೆಯನ್ನು ಗಮನದಲ್ಲಿರಿಸಿಕೊಂಡು ಉದ್ಯಮ ಆರಂಭಿಸಬೇಕು. ಇನ್ನು 25 ವರ್ಷದಲ್ಲಿ ಭಾರತದಲ್ಲಿ ಅತಿ ಹೆಚ್ಚು ವೃದ್ಧರು ಇರುತ್ತಾರೆ. ಆ ವೇಳೆಗೆ ತಂತ್ರಜ್ಞಾನದಲ್ಲಿ ಭಾರತ ಉನ್ನತ ಸ್ಥಾನದಲ್ಲಿರದಿದ್ದರೆ ಕಷ್ಟ. ಈ ನಿಟ್ಟಿನಲ್ಲಿ ಸ್ಟಾರ್ಟಪ್‌ಗಳ ಪಾತ್ರ ಬಹುಮುಖ್ಯ ಎಂದರು.

ಯುವ ಉದ್ಯಮಿ ರೋಹನ್ ಮೂರ್ತಿ ಮಾತನಾಡಿ, ಹೆಚ್ಚಿನ ವೇತನ ನೀಡುವ ಕಂಪನಿಗಳಿಗೆ ಪದವೀಧರರು ಆಯ್ಕೆಯಾಗುವುದು ಉತ್ತಮ ವಿಚಾರ. ಆದರೆ, ಸ್ವಂತ ಉದ್ಯಮ ಸ್ಥಾಪಿಸುವ ಕೆಲವೇ ಆಕಾಂಕ್ಷಿಗಳಿಗೆ ಇನ್‌ಕ್ಯುಬೇಷನ್ ಸೆಂಟರ್‌ಗಳಿಂದ ಅನುಕೂಲವಾಗುತ್ತದೆ. ಆದರೆ, ಕಾಲೇಜು ಕ್ಯಾಂಪಸ್ ಆಯ್ಕೆಗಳಲ್ಲಿ ದೊಡ್ಡ ದೊಡ್ಡ ಕಂಪನಿಗಳಿಗಷ್ಟೇ ಅವಕಾಶ ಸಿಗುತ್ತಿದೆ. ಸ್ಟಾರ್ಟಪ್ ಕಂಪನಿಗಳಿಗೂ ಕ್ಯಾಂಪಸ್ ಸಂದರ್ಶನಕ್ಕೆ ಅವಕಾಶ ನೀಡಬೇಕು. ಅವರು ಹೆಚ್ಚು ಸಂಬಳ ನೀಡದಿರಬಹುದು, ಆದರೆ, ತಮ್ಮ ಕನಸುಗಳ ಸಾಕಾರಕ್ಕೆ ಜತೆಯಾಗುವವರನ್ನು ಕಂಡುಕೊಳ್ಳಬಹುದು ಎಂದರು.

ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಗೌರವ ಕಾರ್ಯದರ್ಶಿ ಎವಿಎಸ್ ಮೂರ್ತಿ, ಇನ್‌ಕ್ಯುಬೇಷನ್ ಕೇಂದ್ರದ ಕಾರ್ಯಕ್ರಮ ನಿರ್ವಾಹಕ ಡಾ. ಮಂಜುನಾಥ್ ಮತ್ತಿತರರಿದ್ದರು.



ಆರ್.ವಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಸ್ಟಾರ್ಟಪ್‌ಗಳಿಗಾಗಿ ಆರಂಭಿಸಲಾದ ಇನ್‌ಕ್ಯುಬೇಷನ್ ಸೆಂಟರ್‌ಗೆ ವಿಆರ್‌ಎಲ್ ಸಮೂಹ ಸಂಸ್ಥೆಗಳ ಚೇರ್ಮನ್ ಡಾ. ವಿಜಯ ಸಂಕೇಶ್ವರ ಶನಿವಾರ ಚಾಲನೆ ನೀಡಿದರು. ಉದ್ಯಮಿ ರೋಹನ್ ಮೂರ್ತಿ, ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಅಧ್ಯಕ್ಷ ಡಾ. ಎಂ.ಕೆ. ಪಾಂಡುರಂಗ ಶೆಟ್ಟಿ, ಜಂಟಿ ಕಾರ್ಯದರ್ಶಿ ಡಿ.ಪಿ. ನಾಗರಾಜ್ ಮತ್ತಿತರರು ಪಾಲ್ಗೊಂಡಿದ್ದರು.

### ಮಾರುಕಟ್ಟೆ ಅಧ್ಯಯನ ಮಾಡಿ

ಯುವಕರು ಉದ್ಯಮ ಸ್ಥಾಪಿಸುವ ಮುನ್ನ ಆ ಕ್ಷೇತ್ರದ ಕುರಿತು ಮಾರುಕಟ್ಟೆ ಅಧ್ಯಯನ ಹಾಗೂ ಅನುಭವಿಗಳ ಮಾರ್ಗದರ್ಶನ ಪಡೆಯಿರಿ ಎಂದು ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಅಧ್ಯಕ್ಷ ಡಾ. ಎಂ.ಕೆ. ಪಾಂಡುರಂಗ ಶೆಟ್ಟಿ ತಿಳಿಸಿದರು. ದೇಶದ ಕುರಿತು ಜನರು ಹೆಚ್ಚೆಚ್ಚು ಯೋಚಿಸುವಂತಹ ವಾತಾವರಣ ನಿರ್ಮಾಣವಾಗುತ್ತಿದೆ. ಸರ್ಕಾರದ ಅನೇಕ ನಡೆಗಳು ಯುವಕರನ್ನು ಪ್ರೇರೇಪಿಸುತ್ತಿವೆ. ಉದ್ಯಮ ಸ್ಥಾಪಿಸುವುದು ಕಷ್ಟದ ಕೆಲಸ. ಅನೇಕ ವೈಫಲ್ಯಗಳನ್ನು ಕಾಣಬೇಕಾಗುತ್ತದೆ. ದಶಕಗಳ ಹಿಂದೆ ಸಿ.ಡಿ. ಉತ್ಪಾದನೆ ಉದ್ಯಮ ಸ್ಥಾಪಿಸಬೇಕೆಂದುಕೊಂಡು ಅಮೆರಿಕದಲ್ಲಿದ್ದ ಸಂಬಂಧಿಕರ ಸಲಹೆ ಕೇಳಿದ್ದೆ. ಆದರೆ, ಮೂರೇ ವರ್ಷದಲ್ಲಿ ಹೊಸ ತಂತ್ರಜ್ಞಾನ ಬರುವ ಕಾರಣ ಆ ಯೋಜನೆ ಬೇಡ ಎಂದಿದ್ದರು. ಈ ರೀತಿ ತಂತ್ರಜ್ಞಾನಗಳಲ್ಲಿನ ಬದಲಾವಣೆ, ಆ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಅನುಭವಿಗಳ ಮಾರ್ಗದರ್ಶನ ಪಡೆಯಿರಿ ಎಂದು ತಿಳಿಸಿದರು.

**ಸ್ಟಾರ್ಟಪ್ ಆರಂಭಕ್ಕೆ ಸಂಸ್ಥೆ ಕ್ಯಾಂಪಸ್‌ನಲ್ಲಿ ಪೂರಕ ವಾತಾವರಣ ನಿರ್ಮಿಸಲು ಯೋಜನೆ ಹಾಕಿಕೊಳ್ಳಲಾಗಿದೆ. ಅದರಂತೆ 6 ತಿಂಗಳಿಂದ 3 ವರ್ಷದವರೆಗೆ ಸ್ಥಳಾವಕಾಶ, ಮಾರ್ಗದರ್ಶನ, ಪ್ರಾರಂಭಿಕ ಹೂಡಿಕೆಯೂ ಲಭ್ಯವಿರಲಿದೆ. ಸದ್ಯ ಆರ್.ವಿ. ಕಾಲೇಜಿನ 4 ಹಾಗೂ ಹೊರಗಿನ 1 ಸ್ಟಾರ್ಟಪ್ ಕೆಲಸ ನಿರ್ವಹಿಸುತ್ತಿವೆ.**

| ಕೆ.ಎನ್. ಸುಬ್ರಹ್ಮಣ್ಯ ಆರ್‌ವಿಸಿಇ ಪ್ರಾಂಶುಪಾಲ

### 2 ವರ್ಷವಾದರೂ ಬಾಡದ ಗುಲಾಬಿ!

**ಆರ್.ವಿ. ಇನ್‌ಕ್ಯುಬೇಷನ್ ಕೇಂದ್ರದಲ್ಲಿ ಐದು ಯುವಕರ ತಂಡ ಕೆಲಸ ನಿರ್ವಹಿಸುತ್ತಿದೆ. ಎಂ.ಎಸ್. ಮಧುಸೂದನ್ ಹಾಗೂ ಪಿ. ಮಧುಸೂದನ್ ಸ್ಥಾಪಿಸಿರುವ ಕ್ಯಾರೆನ್‌ರೋಸ್ ಬಯೋಸೋಲ್ ಸಾಕಷ್ಟು ಜನರ ಗಮನ ಸೆಳೆಯಿತು. ನೈಜ ಹೂವುಗಳಿಗೆ ಸಾವಯವ ಮೂಲದ ಸಂಸ್ಕರಣೆಯನ್ನು ನೀಡಿ ವರ್ಷಾನುಗಟ್ಟಲೆ ಬಾಡದಿರುವಂತೆ ಮಾಡುವ ತಂತ್ರಜ್ಞಾನವನ್ನು ಆವಿಷ್ಕರಿಸಲಾಗಿದೆ. 2 ವರ್ಷ, 6 ತಿಂಗಳ ಹಳೆಯ ಗುಲಾಬಿ ಹೂಗಳನ್ನು ಪ್ರದರ್ಶಿಸಲಾಗಿತ್ತು. ನೆನಪಿನ ಕಾಣಿಕೆಯಾಗಿ ನೀಡುವ ನೈಜ ಹೂವು ಆರು ವರ್ಷದವರೆಗೆ ಹೀಗೇ ಇರಬಲ್ಲದು. ಹೂವಿನ ಸುವಾಸನೆಯನ್ನೂ ಹಿಡಿದಿಡುವ ಕುರಿತು ಹಾಗೂ ಮಾರುಕಟ್ಟೆ ಕುರಿತು ಸಂಶೋಧನೆ ನಡೆಯುತ್ತಿದೆ ಎಂದು ಸಂಸ್ಥೆಯ ಸಿಇಒ ಎಂ.ಎಸ್. ಮಧುಸೂದನ್ ಹೇಳಿದರು.**



ವರ್ಷಗಳವರೆಗೆ ಹೂವು ಬಾಡದಂತೆ ರಕ್ಷಿಸುವ ತಂತ್ರಜ್ಞಾನ ಕುರಿತು ಡಾ. ವಿಜಯ ಸಂಕೇಶ್ವರ ಮಾಹಿತಿ ಪಡೆದರು.